# ಬೋಗನ್‌ವಿಲ್ಲಾ ಕಥೆ

ಸಾಧಾರಣವಾಗಿ ನಾವು ಓದಿದ ಶಾಲಾ–ಕಾಲೇಜುಗಳ ನೆನಪು ಮಾಡಿಕೊಂಡಾಗ ಕಣ್ಣೆದುರು ಬಂದು ನಿಲ್ಲುವ ಸಂಗತಿಗಳೆಂದರೆ, ಅವುಗಳ ಜೊತೆ ಹೊಂದಿಕೊಂಡ ವ್ಯಕ್ತಿ ಅಥವಾ ವಸ್ತುಗಳು. ನಾನು ಓದಿದ ಬೆಂಗಳೂರಿನ ಜ್ಞಾನಭಾರತಿಯಲ್ಲಿನ 'ಕನ್ನಡ ಅಧ್ಯಯನ ಕೇಂದ್ರ'ದ ಪ್ರವೇಶದ ದಾರಿಯಲ್ಲಿ ಅರಳಿ ನಿಂತ ಬೋಗನ್‌ವಿಲ್ಲಾ ಮರಗಳು ಎಲ್ಲಾ ಕಾಲದಲ್ಲೂ ಮಾಸದ ನೆನಪಾಗಿವೆ. ಮೈ ತುಂಬಾ ಹೂ ತಳೆದ, ಎಲೆಗಳೇ ಇಲ್ಲದ ಬಣ್ಣ ಬಣ್ಣದ ಆ ಹೂವುಗಳ ಜೊತೆ ಮರೆಯಲಾರದ ಸಂಬಂಧ ನನಗೆ. ಈಗಲೂ ಕನ್ನಡ ಅಧ್ಯಯನ ಕೇಂದ್ರವೆಂದರೆ ನೆನಪಾಗುವುದು ಬೋಗನ್‌ವಿಲ್ಲಾಗಳೇ.

ಕನ್ನಡ ಕಾವ್ಯ ಪರಂಪರೆಯಲ್ಲಿ ಹೂಗಳನ್ನು ಕುರಿತು ಬರೆದ ಏಕೈಕ ಕಾವ್ಯ ಹರಿಹರನ 'ಪುಷ್ಪ ರಗಳೆ'. ಧಾನ್ಯಗಳ ಮೂಲಕ ಕುಲದ ತಾರತಮ್ಯ ಚಿತ್ರಿಸಿದ ಏಕೈಕ ಕಾವ್ಯವೆಂದರೆ ಕನಕನ 'ರಾಮಧಾನ್ಯ ಚರಿತೆ'. ಈ ಎರಡೂ ಕಾವ್ಯಗಳು ಮಾತ್ರ ಸಿದ್ಧಪ್ರಸಿದ್ಧ ರಾಜರು, ನಾಯಕರನ್ನು ಹೊರಗಿಟ್ಟು ಬರೆದ ಲೌಕಿಕ ಕಾವ್ಯಗಳು. ಇತ್ತೀಚೆಗೆ ಡಾ. ಚನ್ನೇಶ್ ನ್ಯಾಮತಿಯವರು ಸಸ್ಯ, ಧಾನ್ಯ, ಹೂಲೋಕವನ್ನು 'ಫೇಸ್‌ಬುಕ್'ನಲ್ಲಿ ಪರಿಚಯಿಸುತ್ತಿದ್ದು, ಆ ಸಸ್ಯ ಪ್ರಭೇದಗಳು ಬೆಳೆದುಬಂದ ಮೂಲ, ಬಳಕೆ, ಪರಿಣಾಮ–ದುಷ್ಪರಿಣಾಮಗಳನ್ನು ಪರಿಚಯಿಸುತ್ತಿರುವ ರೀತಿ ವಿಭಿನ್ನವಾದದ್ದು. ಶಿಕ್ಷಣವಿಲ್ಲದೆಯೂ ಬೆರಗು ಮತ್ತು ಆಸಕ್ತಿಯಿಂದ ಸಸ್ಯವಿಜ್ಞಾನಕ್ಕೆ ಕಾಣಿಕೆ ಕೊಟ್ಟ ಸಸ್ಯ ವಿಜ್ಞಾನಿಗಳು ಅವರು ನಡೆಸಿದ ಶೋಧದ ಜೊತೆ ಪರಿಚಯ ಮಾಡಿಕೊಡುತ್ತಿರುವುದು ಮೆಚ್ಚುವ ಸಂಗತಿಯಾಗಿದೆ.

ಚನ್ನೇಶ್ ಅವರು ಇತ್ತೀಚೆಗೆ ನಾವು ಬೋಗನ್‌ವಿಲ್ಲಾ ಎಂದು ಕರೆಯುವ 'ಬೋಗನ್ ವಿಲಿಯಾ' ಎಂಬ ಹೂವಿನ ಹಿನ್ನೆಲೆ ವಿವರಿಸಿದ್ದರು. ಅದರ ಮೂಲ, ಅದನ್ನು ಜಗತ್ತಿಗೆ ಪರಿಚಯಿಸಿದ 'ಜಿಮಾನ್ ಬರೇ' ಎಂಬ ಅನ್ವೇಷಕಿಯ ಪರಿಚಯ ಗಮನ ಸೆಳೆಯುತ್ತದೆ. ನಮ್ಮ ನಗರಗಳ ವಿಶಾಲವಾದ ಕಾಲೇಜುಗಳು, ರಸ್ತೆಗಳು, ಪಾರ್ಕುಗಳು ಮುಂತಾದ ಸ್ಥಳಗಳಲ್ಲಿ ಮೈತುಂಬಾ ಹೂ ಮುಡಿದು ನಲಿಯುವ ಈ ಹೂಕನ್ನೆ ಹೂಹಾಸಿನ ಮೇಲೆ ನಿಂತವಳು. ಆದರೆ ಜನರ ಮನಸ್ಸನ್ನು ಸೆಳೆಯುವ ಈ ಅಂದದ ಹೂವುಗಳ ಒಡಲಲ್ಲಿ ಅದರ ಬೆನ್ನತ್ತಿ ಹಿಡಿದು ತಂದ ಜಿಯಾನ್ ಬರೇ ಎಂಬ ಸಸ್ಯವಿಜ್ಞಾನಿಯಲ್ಲದ ಸಸ್ಯವಿಜ್ಞಾನಿಯ ನೋವಿನ ಕಥೆಯಿದೆ.

ತನ್ನ ಗುರು ಹಾಗೂ ಸಂಗಾತಿಯಾದ ಫ್ರಾನ್ಸಿನ ಸಸ್ಯವಿಜ್ಞಾನಿ 'ಫಿಲಿಬರ್ಟ್ ಕಾಮರ್' ಜೊತೆ ಹಲವು ಗಂಡಸರ ಮಧ್ಯೆ ಗಂಡಸಿನಂತೆ ತನ್ನನ್ನು ಮರೆಮಾಚಿಕೊಂಡು, ಹಡಗಿನಲ್ಲಿ ಜಗತ್ತನ್ನು ಸುತ್ತಿ ಬಂದ ಜಿಯಾನ್ ಬರೇ ನೌಕಾಯಾನ ಮಾಡಿದ ಮೊಟ್ಟ ಮೊದಲ ಶೋಧಕಿಯಾಗಿದ್ದಾಳೆ. ನೌಕಾಯಾನದ ಮೂಲಕ ಹೊಸ ಹೊಸ ಅನ್ವೇಷಣೆಗೆ ಹಂಬಲಿಸಿ ಆಕೆ ಜಗತ್ತನ್ನು ಸುತ್ತುತ್ತಿದ್ದ ಹಡಗಿನ ಕ್ಯಾಪ್ಟನ್ ಆಗಿದ್ದವನು 'ಆಂಟೋನಿ ಬೋಗೆನ್ ವಿಲ್ಲೆ' ಎಂಬಾತ. ಆತ 'ಕ್ಯಾಪ್ಟನ್ ಥಾಮಸ್ ಕುಕ್'ನ ಸಮಕಾಲೀನ. ಫಿಲಿಬರ್ಟ್ ಕಾಮರ್ ತನ್ನ ನೆಚ್ಚಿನ ಕ್ಯಾಪ್ಟನ್‌ನ ಗೌರವಕ್ಕಾಗಿ ತಾನು ಕಂಡುಕೊಂಡ ಹೂವಿಗೆ ಬೊಗೆನ್ ವಿಲ್ಲೆ ಎಂದು ನಾಮಕರಣ ಮಾಡಿದ್ದರು.

ನಮಗೆ ಹೂವೆಂದು ಗೋಚರಿಸುವ ಈ ಬೋಗನ್‌ವಿಲ್ಲಾ ಮೂಲತಃ ಹೂವಲ್ಲ. ಆಕರ್ಷಕವಾದ ಬಣ್ಣ ಬಣ್ಣದ ಎಲೆಗಳಿಂದ ಕೂಡಿದ್ದು ಮಧ್ಯೆ ಪುಟ್ಟ ಬಿಳಿಯ ಹೂವನ್ನು ಕೇಸರದಂತೆ ಹೊಂದಿರುತ್ತದೆ. ಈ ಹೂವಿನ ಆಕಾರಕ್ಕೂ ಜಿಯಾನ್ ಬರೇ ಕತೆಗೂ ಸಾಕಷ್ಟು ಹೋಲಿಕೆಗಳಿವೆ. ಸಾಮಾನ್ಯ ಕೂಲಿಕಾರನ ಮಗಳಾಗಿದ್ದ ಜಿಯಾನ್, ಸಸ್ಯವಿಜ್ಞಾನಿ ಫಿಲಿಬರ್ಟ್ ಮನೆಯಲ್ಲಿ ಮನೆಗೆಲಸಕ್ಕೆಂದು ಬಂದವಳು. ಆತನ ಹೆಂಡತಿ ಸತ್ತ ನಂತರ ಸಂಗಾತಿಯಾಗುತ್ತಾಳೆ. ಆತನ ಮಗುವನ್ನು ನೋಡಿಕೊಳ್ಳುತ್ತಾ ದಾಂಪತ್ಯದ ಜೊತೆ ಸಂಶೋಧನೆಯಲ್ಲಿ ಸಹಾಯಕಿಯೂ ಆಗುತ್ತಾಳೆ.

ಜಿಯಾನ್‌ಗೆ ತನ್ನ ಸುತ್ತಮುತ್ತಲಿನ ಸಸ್ಯ ಹಾಗೂ ಅದರ ತಳಿಗಳ ಬಗ್ಗೆ ಆಸಕ್ತಿಯಿತ್ತು. ಮುಂದೆ ಯೂರೋಪ್‌ನ ಹಡಗು ಜಗತ್ತಿನ ಬಗ್ಗೆ ಅನ್ವೇಷಣೆ ನಡೆಸಲು ಹೊರಟಾಗ ಆ ಶೋಧನೆಯಲ್ಲಿ ಸಸ್ಯ ವಿಜ್ಞಾನಿ ಫಿಲ್‌ಬರ್ಟ್ ಆಯ್ಕೆಯಾಗುತ್ತಾರೆ. ತಮ್ಮ ಆರೋಗ್ಯ ನೋಡಿಕೊಳ್ಳಲು ಸಂಗಾತಿಯ ಅವಶ್ಯಕತೆಯಿದ್ದು ಸಸ್ಯಸಂಗ್ರಹದಲ್ಲಿ ನೆರವಾಗಲೆಂದು ಪುರುಷವೇಷದಲ್ಲಿನ ಆಕೆಯನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುತ್ತಾರೆ. ಈ ಸಮುದ್ರಯಾನದಲ್ಲಿ ಬ್ರೆಜಿಲ್‌ನ ರಿಯೋ ಪ್ರದೇಶದಲ್ಲಿ ಜಿಯಾನ್ 'ಬೋಗನ್' ಬಳ್ಳಿಯನ್ನು ಸಂಗ್ರಹಿಸಿದ್ದಳು.

ಯಾನದ ಸಂದರ್ಭದಲ್ಲಿ ಆಕಸ್ಮಿಕವಾಗಿ ಅವಳು ಹೆಣ್ಣು ಎಂದು ತಿಳಿದು ಅವಳ ಮೇಲೆ ಹಲ್ಲೆ ಮಾಡಲಾಗುತ್ತದೆ. ಮುಂದೆ ಮಾರಿಷಸ್ ದ್ವೀಪದಲ್ಲಿ ಅಪಾಯದಿಂದ ಪಾರಾಗಲು ಸ್ನೇಹಿತರ ನೆರವು ಪಡೆದು ಅಲ್ಲೇ ಬೀಡು ಬಿಡುತ್ತಾರೆ. ಮುಂದೆ ಹಲವಾರು ದ್ವೀಪಗಳಲ್ಲಿ ಅಲೆದಾಡಿ 6000ಕ್ಕೂ ಹೆಚ್ಚು ಸಸ್ಯ ಹಾಗೂ ಜೀವಿಗಳ ಪ್ರಭೇದ ಹಾಗೂ ಅವಶೇಷಗಳನ್ನು ಸಂಗ್ರಹಿಸುತ್ತಾಳೆ. 1773ರಲ್ಲಿ ಫಿಲಿಬರ್ಟ್ ಸಾವನ್ನಪ್ಪುತ್ತಾರೆ. ಈ ದಾಂಪತ್ಯಯಾನದಲ್ಲಿ ಹುಟ್ಟಿದ ಮಗುವು ತೀರಿಹೋಗುತ್ತದೆ.

ಅಪಾರವಾದ ಸಸ್ಯ ಸಂಗ್ರಹವನ್ನು ಹೊತ್ತು ತಾಯ್ನಾಡಿಗೆ ಹಿಂತಿರುಗಬೇಕಾದ ಈಕೆ 1774ರಲ್ಲಿ ಫ್ರೆಂಚ್ ಸೈನಿಕನೊಬ್ಬನನ್ನು ಲಗ್ನವಾಗಿ, ಅವನ ಸಹಾಯದಿಂದಲೇ ತನ್ನ ತಾಯಿದೇಶವನ್ನು ತಲುಪುತ್ತಾಳೆ. ಯಾವುದೇ ಸಂಭ್ರಮಗಳ ಸ್ವಾಗತವಿಲ್ಲದೆ ಆಕೆ ಬದುಕಿನ ಕೊನೆಯ ಕಾಲದಲ್ಲಿ ಒಂದಷ್ಟು ಪಿಂಚಣಿಯನ್ನು ನೌಕಾ ಇಲಾಖೆಯಿಂದ ಪಡೆಯುತ್ತಾಳೆ. 1807ರಲ್ಲಿ ತೀರಿಹೋದಾಗ ಆಕೆಗೆ 67 ವರ್ಷ. ಅನಕ್ಷರಸ್ಥ ಕೂಲಿ ಕುಟುಂಬದಿಂದ ಬಂದು ಸಸ್ಯವಿಜ್ಞಾನಿಯ ಸಂಗಾತಿಯಾಗಿ, ಸಂಶೋಧಕಿಯಾಗಿ ಅಪಾರ ಸಸ್ಯ ಪ್ರಭೇದಗಳ ಪರಿಚಯವನ್ನು ಜಗತ್ತಿಗೆ ಕೊಡುಗೆಯಾಗಿ ಕೊಟ್ಟವಳು. ಬೋಗನ್‌ವಿಲ್ಲಾದ ಎಳೆಗಳು ಒಳಗೆ ಸಣ್ಣ ಹೂವನ್ನು ಮುಚ್ಚಿಟ್ಟುಕೊಂಡಂತೆ ಈಕೆಯೂ ಪುರುಷನ ದಿರಿಸಿನ ಒಳಗೆ ತನ್ನ ಆತ್ಮ ಮತ್ತು ದೇಹವನ್ನು ಹುದುಗಿಸಿಕೊಂಡವಳು. ಸಂಶೋಧನೆಯ ಮೂಲಕ ಅರಳಿದ ಈ ಬೋಗನ್‌ವಿಲ್ಲಾಳನ್ನು ಜಗತ್ತು ನಿಧಾನವಾಗಿ ಗುರುತಿಸಿದ್ದು ಬೇಸರ ಉಂಟುಮಾಡುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಮನೆ ನಿಂತಿರುವುದು ಮಡದಿಯಿಂದ, ಅದು ಬಿದ್ದರೆ ಗಂಡನ ತಲೆ ಮೇಲೆ.

  —ಬೀಚಿ

- ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಅದರ ಪಾಲಿಗಲ್ಲ.

  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ ಅದೇ ಶ್ರೇಷ್ಠ ಸರ್ಕಾರ.

  —ಮೆಕಾಲೆ

- ವಿವೇಕಿಯಾದವನು ಬೇರೆಯವರ ತಪ್ಪನ್ನು ಕಂಡು ತನ್ನಲ್ಲಿರುವ ತಪ್ಪನ್ನು ತಿದ್ದಿಕೊಳ್ಳುತ್ತಾನೆ.

  —ಸ್ವಾಮಿ ವಿವೇಕಾನಂದ

- ಶಾಂತಿ ನಮ್ಮೊಳಗಿನಿಂದ ಬರುವಂತಹದ್ದು. ಅದನ್ನು ಹೊರಗಿನಿಂದ ನಿರೀಕ್ಷಿಸಬೇಡಿ.

  —ಗೌತಮ ಬುದ್ಧ

- ಸರಳ ಜೀವನ ಮತ್ತು ಮೇಲ್ಮಟ್ಟದ ವಿಚಾರ ಮನುಷ್ಯನನ್ನು ಮಹಾನ್ ಆಗಿ ಮಾಡುತ್ತದೆ.

  —ಮಹಾತ್ಮ ಗಾಂಧೀಜಿ

- ಪ್ರೀತಿಯು ಒಡೆತನವನ್ನು ಪ್ರತಿಪಾದಿಸುವುದಿಲ್ಲ. ಸ್ವಾತಂತ್ರ್ಯವನ್ನು ನೀಡುತ್ತದೆ.

  —ರವೀಂದ್ರನಾಥ್ ಟ್ಯಾಗೋರ್

- ಅಜ್ಞಾನದಿಂದ ಜ್ಞಾನದೆಡೆಗೆ ಹೋಗುವುದೇ ಎಲ್ಲ ವಿದ್ಯೆಗಳ ಗುರಿ. ಕತ್ತಲೆಯಿಂದ ಬೆಳಕಿನೆಡೆಗೆ ಹೋಗುವುದೇ ಎಲ್ಲ ಜ್ಯೋತಿಗಳ ಧರ್ಮ. ನಮ್ಮಲ್ಲಿ ಅಜ್ಞಾನ ತೊಲಗುವ ಜ್ಞಾನದ ಬೆಳಕು ಬೆಳಗುವ ಜ್ಯೋತಿಗಾಗಿ ಪ್ರಾರ್ಥಿಸಬೇಕು.

  —ಅನಾಮಿಕ

- ಅನುಭವವಿರುವಲ್ಲಿ ಅಮೃತ ವಿದೆ.

  —ಗಾದೆ